ದಿನಾಂಕ 12-04-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 21 ರಿಂದ 26 ನೇ ಪ್ರತಿವಾದಿಯ ಪರ ಶ್ರೀ ಎಫ್.ಬಿ.ಎಂ ವಕೀಲರಿಂದಃ**

1. ನಾನು, ವಾದಿಗಳು ಮತ್ತು ಪ್ರತಿವಾದಿಗಳು ವಾಲ್ಮೀಕಿ ಜನಾಂಗಕ್ಕೆ ಸೇರಿದ ವ್ಯಕ್ತಿಗಳು ಎಂದರೆ ಸರಿ. ಕಂಚಿನೆಗಳೂರು ಗ್ರಾಮದಲ್ಲಿ ಇರುವ ವಾಲ್ಮೀಕಿ ಜನಾಂಗದ ವ್ಯಕ್ತಿಗಳ ಪೈಕಿ ನಾನೇ ಹಿರಿಯ ವ್ಯಕ್ತಿ ಎಂದರೆ ಸರಿ. ನನಗೆ ಹೆಚ್ಚಿನ ವಯಸ್ಸು ಮತ್ತು ಹಿರಿಯ ವ್ಯಕ್ತಿ ಆಗಿರುವುದರಿಂದ ವಾದಿ ಮತ್ತು ಪ್ರತಿವಾದಿಗಳ ಮನೆತನದ ಬಗ್ಗೆ ಮತ್ತು ಅವರ ಹಿರಿಯರ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಭರಮವ್ವ ಇಂಗಳಕಿ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಮಲ್ಲಪ್ಪ ಇಂಗಳಕಿ ರವರ ಪರಿಚಯ ನನಗೆ ಇರುತ್ತದೆ. ಸದರಿ ಮಲ್ಲಪ್ಪ ಇಂಗಳಕಿ ರವರಿಗೆ ಶಿವಪ್ಪ, ಪರಸಪ್ಪ, ಹನುಮಂತಪ್ಪ, ಪಕ್ಕೀರಪ್ಪ, ಬಸವಣ್ಣೆವ್ವ ಮತ್ತು ಪಕ್ಕೀರವ್ವ ಎಂಬ ಗಂಡು ಮತ್ತು ಹೆಣ್ಣು ಮಕ್ಕಳು ಇದ್ದರೆ ಎಂದರೆ ಸರಿ. ಸದರಿ ಮಲ್ಲಪ್ಪ ಇಂಗಳಕಿ ರವರ ತಾಯಿಯ ಹೆಸರು ಭರಮಕ್ಕ ಎಂದರೆ ಗೊತ್ತಿಲ್ಲ. ಸದರಿ ಪರಸಪ್ಪ ರವರಿಗೆ ಪಕ್ಕೀರವ್ವ ಎಂಬ ಹೆಂಡತಿ ಇದ್ದಳು ಎಂದರೆ ಸಾಕ್ಷಿಯು ಆತನ ಹೆಂಡತಿ ಮಲ್ಲವ್ವ ಎಂದು ನುಡಿಯುತ್ತಾರೆ. ಸದರಿ ಪರಸಪ್ಪ ರವರಿಗೆ ರಮೇಶ, ಲಕ್ಷ್ಮಪ್ಪ, ಕರಬಸಪ್ಪ ಮತ್ತು ಸೋಮಕ್ಕ ರವರು ಮಕ್ಕಳು ಎಂದರೆ ಸರಿ.

2. ಮಲ್ಲಪ್ಪನ ಮತ್ತೊಬ್ಬ ಮಗನಾದ ಶಿವಪ್ಪನಿಗೆ ಬಸವಂತಪ್ಪ, ಚಂದ್ರಪ್ಪ, ಮಲ್ಲೇಶಪ್ಪ, ನಾಗಪ್ಪ, ಭರಮವ್ವ, ಶೇಖವ್ವ ಮತ್ತು ರೇಣುಕಾ ಎಂಬುವವರು ಮಕ್ಕಳು ಎಂದರೆ ಸರಿ. ಮಲ್ಲಪ್ಪನ ಮತ್ತೊಬ್ಬ ಮಗನಾದ ಹನುಮಂತಪ್ಪ ಮರಣ ಹೊಂದಿದ್ದು, ಆತನಿಗೆ ಶಿವಾನಂದಪ್ಪ, ಶೇಖಪ್ಪ, ಶ್ರೀಕಾಂತ, ಗೋವಿಂದಪ್ಪ, ಗೋಪಾಲ, ಕೃಷ್ಣಾ ಮತ್ತು ಗುತ್ತೆಮ್ಮ ಎಂಬುವವರು ಮಕ್ಕಳು ಎಂದರೆ ಸರಿ. ಮಲ್ಲಪ್ಪನ ಮತ್ತೊಬ್ಬ ಮಗನಾದ

ಪಕ್ಕೀರಪ್ಪ ರವರು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಆತನಿಗೆ ಸಿದ್ಲಿಂಗಪ್ಪ ಎಂಬ ಮಗ ಮತ್ತು 3 ಜನ ಹೆಣ್ಣುಮಕ್ಕಳು ಇರುತ್ತಾರೆ. ಹೆಣ್ಣು ಮಕ್ಕಳ ಹೆಸರು ನನಗೆ ಗೊತ್ತಿರುವುದಿಲ್ಲ.

3. ಭರಮಪ್ಪ ಇಂಗಳಕಿ ರವರಿಗೆ ಭೀಮಾ ತಂದೆ ಹನುಮಂತಪ್ಪ ಇಂಗಳಕಿ ಎಂಬ ದಾಯಾದಿ ಇದ್ದರು ಎಂದರೆ ಸರಿ. ಭರಮಪ್ಪ ಇಂಗಳಕಿ ಇವರಿಗೆ ಬಸಪ್ಪ ತಂದೆ ಸಣ್ಣ ಹನುಮಂತಪ್ಪ ಇಂಗಳಕಿ ಎಂಬುವವರು ದಾಯಾದಿ ಎಂದರೆ ಗೊತ್ತಿಲ್ಲ. ಸದರಿ ಬಸಪ್ಪ ತಂದೆ ಸಣ್ಣ ಹನುಮಂತಪ್ಪ ಇಂಗಳಕಿ ರವರಿಗೆ ತಿರಕಪ್ಪ ಮತ್ತು ಬಿದ್ದಾಡಪ್ಪ ಎಂಬ ಮಕ್ಕಳು ಎಂದರೆ ಸರಿ. ಯಲ್ಲಪ್ಪ ತಂದೆ ಈರಪ್ಪ ಇಂಗಳಕಿ ರವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ತಿರಕಪ್ಪ ಇಂಗಳಕಿ ರವರಿಗೆ ಭೀಮವ್ವ ಎಂಬ ಹೆಂಡತಿ ಇದ್ದಳು ಎಂದರೆ ಗೊತ್ತಿಲ್ಲ. ಬಸಪ್ಪನ ಮಕ್ಕಳಾದ ತಿರಕಪ್ಪ ಮತ್ತು ಬಿದ್ದಾಡೆಪ್ಪ ಇಬ್ಬರೂ ಮರಣ ಹೊಂದಿರುತ್ತಾರೆ. ಯಲ್ಲಪ್ಪನ ಮಗ ತಿರಕಪ್ಪ ಸಹ ಮರಣ ಹೊಂದಿರುತ್ತಾನೆ ಎಂದರೆ ಸರಿ. ಸದರಿ ತಿರಕಪ್ಪನ ಹೆಂಡತಿಯಾದ ಭೀಮವ್ವ ಜೀವಂತ ಇದ್ದಾರೆ.

4. ದಾವಾ ಆಸ್ತಿಗಳ ಸರ್ವೇ ನಂಬರುಗಳು, ಅವುಗಳ ಚಕ್ಕುಬಂದಿ ಮತ್ತು ವಿಸ್ತೀರ್ಣಗಳು ಗೊತ್ತಿರುವುದಿಲ್ಲ. ವಾದಿಯರ ಚಿಕ್ಕಪ್ಪನ ಹೆಸರು ಪಕ್ಕೀರಪ್ಪ ಎಂದರೆ ಸರಿ. ಪಕ್ಕೀರಪ್ಪ ಮರಣ ಹೊಂದುವ ಪೂರ್ವದಲ್ಲಿಯೇ ವಾದಿಯರ ತಂದೆ ಪುಟ್ಟಪ್ಪ ಮರಣ ಹೊಂದಿದ್ದರು ಎಂದರೆ ಸರಿ. ಪುಟ್ಟಪ್ಪ ಮರಣ ಹೊಂದುವ ಸಮಯಕ್ಕೆ ಆತನ ಮಕ್ಕಳಾದ ವಾದಿಗಳು ಚಿಕ್ಕವರಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯರ ಮದುವೆ ಆಗಿತ್ತು ಎಂದು ನುಡಿಯುತ್ತಾರೆ. ಪುಟ್ಟಪ್ಪ ರವರು ತನ್ನ ಜೀವಿತಾವಧಿಯಲ್ಲಿ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ತನ್ನ ಮತ್ತು ಸಹೋದರನಾದ ಪಕ್ಕೀರಪ್ಪನ ನಡುವೆ ವಿಭಾಗ ಮಾಡಿಕೊಂಡಿದ್ದರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ.

5. ಪುಟ್ಟಪ್ಪ ಮರಣ ಹೊಂದಿದ ನಂತರ ಕುಟುಂಬದ ಮೇಲ್ವಿಚಾರಣೆ ಮತ್ತು ವ್ಯವಹಾರವನ್ನು ಪಕ್ಕೀರಪ್ಪ ಮಾಡುತ್ತಿದ್ದರು. ಕಂಚಿನೆಗಳೂರು ಗ್ರಾಮದಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘ ಇದೆ. ಸದರಿ ಸಹಕಾರ ಸಂಘದಲ್ಲಿ ಜಮೀನುಗಳ ಮೇಲೆ ಬೆಳೆ ಸಾಲವನ್ನು ನೀಡುತ್ತಾರೆ ಎಂದರೆ ಸರಿ. ಪಕ್ಕೀರಪ್ಪ ರವರು ತನ್ನ ಜೀವಿತಾವಧಿಯಲ್ಲಿ ಯಾವ ಆಸ್ತಿಗಳನ್ನು ಮತ್ತು ಯಾವ ಕಾರಣಕ್ಕೆ ಮಾರಾಟ ಮಾಡಿರುತ್ತಾನೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಪಕ್ಕೀರಪ್ಪನ ಮಕ್ಕಳು ವಹಿವಾಟು ಮಾಡುತ್ತಿದ್ದಾರೆ. ಪಕ್ಕೀರಪ್ಪನ ಮಕ್ಕಳು ಯಾವ ಜಮೀನುಗಳನ್ನು ವಹಿವಾಟು ಮಾಡುತ್ತಿದ್ದಾರೆ ಮತ್ತು ಅವುಗಳ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಇಂಗಳಕಿ ಮನೆತನದ ವ್ಯಕ್ತಿಗಳು ಕುಟುಂಬದ ಯಾವ ಯಾವ ಆಸ್ತಿಗಳಲ್ಲಿ ಎಷ್ಟು ಹಿಸ್ಸೇಯ ಹಕ್ಕನ್ನು ಹೊಂದಿದ್ದರು ಎಂದು ಗೊತ್ತಿಲ್ಲ. ಎಲ್ಲಾ ದಾವಾ ಆಸ್ತಿಗಳನ್ನು ಪಕ್ಕೀರಪ್ಪನ ಮಕ್ಕಳು ವಹಿವಾಟು ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಾವಾ ಆಸ್ತಿಗಳಿಗೆ ಹೊಂದಿಕೊಂಡಂತೆ ನನಗೆ ಸೇರಿದ ಜಮೀನುಗಳು ಇರುವುದಿಲ್ಲ. ದಾವಾ ಆಸ್ತಿಗಳನ್ನು ಯಾವ ಯಾವ ಪ್ರತಿವಾದಿಗಳು ವಹಿವಾಟು ಮಾಡುತ್ತಿರುತ್ತಾರೆ ಎಂದು ನಾನು ಖುದ್ದಾಗಿ ಹೋಗಿ ನೋಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ಹಿರಿಯರು ಮತ್ತು ವಂಶಸ್ಥರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ಅದೇ ರೀತಿ ದಾವಾ ಆಸ್ತಿಗಳು ಯಾರಿಗೆ ಮತ್ತು ಯಾವ ರೀತಿ ಬಂದಿರುತ್ತವೆ ಎಂದು ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನಗೆ ದಾವೆಯ ಬಗ್ಗೆ ಮತ್ತು ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ವಾದಿಗಳು ನನ್ನ ಹತ್ತಿರದ ಸಂಬಂಧಿಗಳು ಇರುವುದರಿಂದ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ